# ಕೇಳನೋ ಹರಿ ತಾಳನೊ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 199.
2. **Ref.:** Purandara Sahitya Darshana, Samputa 4, Keerthana Darshana edited by Prof. S.K. Ramachandra Rao, page No. 169.
3. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchha Rayaru, page No. 142.
4. **Note:** Lyrics given here are as per Ref. 1. The wordings in Ref. 2 fully matches with Ref. 1. The wordings in Ref. 2 almost fully matches except few minor ones, which are not considered here.
5. **Note:** Singer has followed these lyrics.

ರಾಗ: ಕಲ್ಯಾಣಿ ತಾಳ: ಅಟ

ಕೇಳನೋ ಹರಿ ತಾಳನೋ || ಪ ||
ತಾಳ ಮೇಳಗಳಿದ್ದು ಪ್ರೇಮವಿಲ್ಲದ ಗಾನ || ಅಪ ||

ತಂಬೂರಿ ಮೊದಲಾದ ಅಖಿಳ ವಾದ್ಯಗಳಿದ್ದು
ಕೊಂಬು ಕೊಳಲು ಧ್ವನಿ ಸ್ವರಗಳಿದ್ದು
ತುಂಬುರು ನಾರದರ ಗಾನ ಕೇಳುವ ಹರಿ
ನಂಬಲಾರ ಈ ಡಂಭಕದ ಕೂಗಾಟ || 1 ||

ನಾನಾ ಬಗೆಯ ರಾಗ ಭಾವ ತಿಳಿದು ಸ್ವರ
ಜ್ಞಾನ ಮನೋಧರ್ಮ ಜಾತಿಯಿದ್ದು
ದಾನವಾರಿಯ ದಿವ್ಯ ನಾಮ ರಹಿತವಾದ
ಹೀನ ಸಂಗೀತ ಸಾಹಿತ್ಯಕ್ಕೆ ಮನವಿಟ್ಟು || 2 ||

ಅಡಿಗಡಿಗಾನಂದಭಾಷ್ಪ ಪುಳಕದಿಂದ
ನಡೆ ನುಡಿಗೆ ಶ್ರೀ ಹರಿ ಎನ್ನುತ

ದೃಢ ಭಕ್ತರನು ಕೂಡಿ ಹರಿ ಕೀರ್ತನೆ ಪಾಡಿ
ಕಡೆಗೆ ಪುರಂದರ ವಿಠಲನೆಂದರೆ ಕೇಳ್ವ || 3 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

೧. **ಮೇಳ** = ಕಲಾವಿದರ ಗುಂಪು

**ಅಖಿಲ ವಾದ್ಯ** = ವಾದ್ಯಗಳಲ್ಲಿ ನಾಲ್ಕು ವಿಧಗಳಿವೆ:

* **ಆನದ್ಧ** = ಮೆಚ್ಚಿಗೆಯಿರವ ವಾದ್ಯ, ಉ.ದಾ. : ಮದ್ದಳೆ, ತಬಲಾ, ಮುಂ.
* **ಸುಷಿರ** = ಉಸಿರಿನಿಂದ ಸ್ವರ ಹೊರಡಿಸುವ ವಾದ್ಯ, ಉ.ದಾ.: ಕೊಳಲು, ಭಜಂತ್ರಿ, ಶಂಖ, ಮುಂ.
* **ತತ** = ತಂತಿಯಿಂದಾದ ವಾದ್ಯ, ಉ.ದಾ.: ತಂಬೂರಿ, ವೀಣೆ, ಮುಂ.
* **ಘನ** = ಬಡಿದು ಬಾರಿಸುವ ವಾದ್ಯ, ಉ.ದಾ.: ತಾಳ, ಜಾಂಗಟೆ, ಗಂಟೆ, ಮುಂ.

**ಕೊಂಬು** = ಪಶುಗಳ ಕೊಂಬಿನಿಂದಾದ ವಾದ್ಯ.

**ಸಾರ** = ಸವಿ, ತಿರುಳು

೨. **ಭಾವ** = ಮನಸ್ಸಿನ ಏರಿಳಿತಗಳ ಸೂಚನೆ

**ಸ್ವರ ಜ್ಞಾನ** = ಸಂಗೀತ ಶಾಸ್ತ್ರದ ಮೂಲಭೂತವಾದ ಹನ್ನೆರಡು ಸ್ವರ ಅಥವಾ ೨೨ ಶ್ರುತಿಗಳ ಜ್ಞಾನ

**ಮನೋಧರ್ಮ** = ರಾಗದ ಸ್ವರೂಪವನ್ನು ಸ್ವತಂತ್ರವಾಗಿ ವಿಸ್ತಾರಮಾಡಿ ಪ್ರದರ್ಶಿಸುವುದು.

**ಜಾತಿ** = ತಾಳಗಳ ಜಾತಿ.

೩. **ಹರಿಕೀರ್ತನೆ** = ಶ್ರೀ ಹರಿಯ ಮಹಿಮೆ-ಸ್ತೋತ್ರಗಳಿಂದ ಕೂಡಿದ ಹಾಡು.

**Classification:** Keerthane
**Ankita:** purandara vittala
**Location:** NA
**Category:** pooja tatva
**Sub-Category:** Krishna, prema, tamboori, kolalu, narada, jnana, dharma, divya, sangeeta, mana, Ananda, vaadya,
**Pravachana:** NA
**Explanation:** NA